೧
ಪದ್ಯ

# ಜಾಣ ಇರುವೆ

-ಡಾ॥ ಸಿ.ಎಂ. ಗೋವಿಂದ ರೆಡ್ಡಿ

ಇರುವೆ ಇರುವೆ ಕಪ್ಪು ಇರುವೆ
ನೀನು ಎಲ್ಲಿ ಹೋಗುತಿರುವೆ?
ನಾನೂ ನಿನ್ನ ಜೊತೆಗೆ ಬರುವೆ
ಹಾಗೆ ತಿನಲು ಕಾಳು ತರುವೆ ॥





ಕಲ್ಲು ಮುಳ್ಳು ಮಣ್ಣ ನಡುವೆ
ಗೆಳೆಯರೊಡನೆ ಕೂಡಿ ನಡೆವೆ
ದುಡಿಮೆ ದೇವರೆಂದು ದುಡಿವೆ
ಕಾಳು ಕಾಳು ಕೂಡಿಸಿಡುವೆ ॥

ಸರತಿಯಲ್ಲಿ ಶಾಲೆಯೊಳಗೆ
ಹೋಗುವಂತೆ ಬ್ಯಾಗು ಹೊತ್ತು
ಸಾಲಿನಲ್ಲಿ ಸಾಗುತಿರುವೆ
ಗೂಡಿನೊಳಗೆ ಕಾಳು ಹೊತ್ತು ॥





ಜಗಳವನ್ನೆ ಮಾಡದಿರುವೆ
ಬಳಗವನ್ನು ತೊರೆಯದಿರುವೆ
ದುಡಿಮೆಯನ್ನು ಮರೆಯದಿರುವೆ
ನೀನು ತುಂಬಾ ಜಾಣ ಇರುವೆ ॥